ಘಟಿಸಿದ ಆಘಾತದಿಂದ ದಂಪತಿ ಜರ್ಜರಿತರಾಗಿದ್ದು ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು. ರೇವತಿಯ ಕಣ್ಣುಗಳಿಂದ ನೀರು ಹರಿಯುತ್ತಿದ್ದವು. ಮತಿ ಭ್ರಾಂತಳಂತೆ ಮಾತನಾಡಿದ್ದನ್ನೆ ಮಾತನಾಡುತ್ತಿದ್ದಳು. "ಮೊನ್ನೆಯೆ ದೃಷ್ಟಿಬೊಟ್ಟು ಹಚ್ಚಿದ್ದೆ. ಎಷ್ಟೊಂದು ಚೆಲುವನಾಗಿ ಕಾಣುತ್ತಿದ್ದ. ದೊಡ್ಡವನಾದ ಮೇಲೆ ನನ್ನ ತದ್ರೂಪವೆ ಆಗುತ್ತಿದ್ದ. ನನ್ನ ಯಜಮಾನರು, 'ಮಗು ನನ್ನನ್ನು ಹೋಲುತ್ತಿಲ್ಲ' ಎಂದು ಅನ್ನುತ್ತಿದ್ದರು. ಆದರೆ ಮಗುವಿನ ಕಣ್ಣುಗಳು ಇವರಂತೆಯೇ ಇದ್ದವು. ನಾನು ಆ ಹುಡುಗಿಯ ಸಂಗಡ ನನ್ನ ಮಗುವನ್ನು ಕಳಿಸಬಾರದಿತ್ತು, ನನ್ನದೇ ತಪ್ಪು" ಎಂದು ಮತ್ತೆ ಅಳಲಾರಂಭಿಸಿದಳು. ನಿಶಿಕಾಂತನಿಗೆ ಕೋಣೆಯಲ್ಲಿ ತನ್ನ ಅಸ್ತಿತ್ವ ಇಲ್ಲದ ಹಾಗೆ ಅನಿಸತೊಡಗಿತು. ದುಃಖದ ವಾತಾವರಣ ಕೋಣೆಯನ್ನು ತುಂಬಿತ್ತು. ರೇವತಿಗೆ ಸಾಂತ್ವನ ಹೇಳಲು ಬಂದವರೆಲ್ಲ ಆಕೆಯ ದುಃಖದಲ್ಲಿ ಪಾಲ್ಗೊಂಡಿದ್ದರು. ನಿಶಿಕಾಂತ ನಿರ್ವಿಕಾರನಂತೆ ಸುಮ್ಮನೆ ನಿಂತಿದ್ದ.

ಎಂಟು ಹತ್ತು ದಿನಗಳಲ್ಲಿ ಆತ ಆಕೆಯ ಕಡೆಗೆ ಮೂರು ನಾಲ್ಕು ಸಲ ಹೋದ. ಆದರೆ ರೇವತಿಯ ಅಳು ಸ್ವಲ್ಪವೂ ನಿಂತಿರಲಿಲ್ಲ. ಮಗುವನ್ನು ನೆನೆಸಿ, ಪದೇ ಪದೇ ಅದೇ ಘಟನೆಗಳನ್ನು ಹೇಳುತ್ತ, ಶಿಶುವನ್ನು ನೆನಪಿಸುತ್ತ, ಅಳುವುದು ನಡೆದೇ ಇತ್ತು. ತಾಯಿಯಾದ ರೇವತಿಗೆ ದುಃಖದಿಂದ ಅಲಿಪ್ತಳಾಗಿ ಉಳಿಯುವುದು ಸಾಧ್ಯವೇ ಇರಲಿಲ್ಲ. ಮುಂದೆ ನಾಲ್ಕೈದು ದಿನ ಆತ ಮನೆಯಿಂದ ಹೊರಗೆ ಬೀಳಲಿಲ್ಲ. ಅವನ ಮನದಲ್ಲಿ ಬಿರುಗಾಳಿ ಎದ್ದಿತ್ತು. ತನ್ನ ಜೀವನದ ಬಗ್ಗೆ ವಿಚಾರ ಮಾಡತೊಡಗಿದ. ಈವರೆಗೆ ಕಟ್ಟಿಕೊಂಡ ಬಂಧನಗಳು ಕಳಚಿಕೊಂಡಂತೆ ಅನಿಸಲಾರಂಭಿಸಿತು. ಹಳೆಯ ಸ್ವಪ್ನಗಳು ಮೊದಲಿನಂತೆ ಅವನಿಗೆ ಹರ್ಷವನ್ನು ಕೊಡುತ್ತಿರಲಿಲ್ಲ. ನಿಶಿಕಾಂತ ರೇವತಿಯ ಕಡೆಗೆ ಹೋಗಲಿಲ್ಲ. ಕೆಲಸದ ನಿಮಿತ್ತ ಬೇರೆ ಊರಿಗೆ ಹೋದವನು ಎರಡು ತಿಂಗಳ ನಂತರ ಮರಳಿ ಬಂದ. ಈ ನಡುವೆ ಉದ್ವಿಗ್ನಗೊಂಡ ಅವನ ಮನ ಒಂದು ಸ್ತಿಮಿತಕ್ಕೆ ಬಂದಿತ್ತು. ಆತ ಈಗ ಬೇರೆಯೇ ಮನುಷ್ಯನಾಗಿದ್ದ. ಮರಳಿ ಬಂದ ಮೇಲೆ ಆತ ವಿಚಾರಣೆ ಮಾಡಿದ. ರೇವತಿಯ ರಂಪಾಟ ಇನ್ನೂ ಕಡಿಮೆ ಆಗಿಲ್ಲವೆಂದು ತಿಳಿಯಿತು. ಅವಸರ ಮಾಡದೆ, ಹತ್ತು ದಿನ ಮನೆಯಲ್ಲಿ ವಿಶ್ರಾಂತಿ ತೆಗೆದುಕೊಂಡು, ನಂತರ ಆತ ರೇವತಿಯ ಮನೆಗೆ ಹೋದ. ಈ ಮೊದಲು ಆಕೆಯ ಮನೆಗೆ ಹೋಗುವಾಗ ಎದೆ ಢಡಢಡ ಎನ್ನುತ್ತಿತ್ತು. ಕಾಲುಗಳು ನಡುಗುತ್ತಿದ್ದವು. ಆದರೆ ಈಗ ಹಾಗೇನೂ ಆಗಲಿಲ್ಲ. ಸಂಪೂರ್ಣವಾಗಿ ಆತ ಶಾಂತನಾಗಿದ್ದ. ಆತ ರೇವತಿಯ ಎದುರಿಗೆ ನಿಂತ. ಆಕೆ ವಿಮನಸ್ಕಳಾಗಿದ್ದಳು. ತಾನು ಎರಡೂವರೆ ತಿಂಗಳು ಏಕೆ ಬಂದಿಲ್ಲವೆಂದು ಆಕೆ ವಿಚಾರಣೆ ಮಾಡಬಹುದು ಎಂದು ಆತ ತಿಳಿದುಕೊಂಡಿದ್ದ. ಆಕೆ ಅದರ ಬಗ್ಗೆ ಕೇಳಲೇ ಇಲ್ಲ. ಮೃತ ಮಗನನ್ನು ನೆನೆದು ಅಳುತ್ತ, ಬಡಬಡಿಸುತ್ತಿದ್ದಳು. ಆಕೆ ಮಾತನಾಡುವಾಗ, ಮಧ್ಯದಲ್ಲಿಯೇ ನಿಶಿಕಾಂತ ಮಾತನಾಡಿದ, "ನಾನೊಂದು ನಿರ್ಣಯಕ್ಕೆ ಬಂದಿದ್ದೇನೆ..." "ಏನದು?" ಸೆರಗಿನಿಂದ ಮೂಗು ಒರೆಸುತ್ತ ರೇವತಿ ಕೇಳಿದಳು. "ನಾನು ಮದುವೆ ಆಗಲು ಬಯಸಿದ್ದೇನೆ." ಆಕೆ ಅವನನ್ನು ನೇರವಾಗಿ ನೋಡಿದಳು. ಆತನಿಂದ ಈ ಮಾತನ್ನು ಆಕೆಗೆ ಅಪೇಕ್ಷಿಸಿರಲಿಲ್ಲ. "ಒಮ್ಮೇಲೆ ಈ ನಿರ್ಣಯಕ್ಕೆ ಬಂದೆಯಾ? ಆದರೆ ನಾವಿಬ್ಬರು ಹೀಗೇ ಇರೋಣವೆಂದು ಈ ಹಿಂದೆ ನೀನು..." "ಅದು ಮೂರ್ಖತನವೆಂದು ನಾನು ಈ ನಿರ್ಣಯಕ್ಕೆ ಬಂದು ಮುಟ್ಟಿದ್ದೇನೆ. ನಿನ್ನ ಮನ ನನ್ನಲ್ಲಿಯೇ ರಮಿಸಿದೆ, ನೀನು ನನ್ನವಳೇ ಎಂದು ತಿಳಿದುಕೊಂಡಿದ್ದೆ ಹಾಗೂ ಸಂತೋಷಗೊಂಡಿದ್ದೆ. ಆದರೆ ನಾನು ಭ್ರಮೆಯ ಜಗತ್ತಿನಲ್ಲಿ ಇದ್ದುದು ನನಗೆ ತಡಮಾಡಿ ತಿಳಿದು ಬಂದಿತು. ನಿನ್ನ ಮಗುವಿನ ಅಪಮೃತ್ಯು ನನಗೆ ವಾಸ್ತವದ ಅರಿವು ಮಾಡಿ